ಬೇರೆ ರಾಜ್ಯದಲ್ಲಿ ಈ ವ್ಯವಸ್ಥೆ ಇಲ್ಲ ಎಂಬ ಒಂದೇ ಕಾರಣಕ್ಕಾಗಿ ಜಾರಿಗೊಳಿಸಿರತಕ್ಕ ವಿವಾದಾತ್ಮಕವಾಗ ದಂಥ ನಿರ್ಧಾರದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾದ ಅಗತ್ಯ ಇಲ್ಲ ಎಂದು ಸರ್ಕಾರದವರು ಸ್ವತ್ಃ ನಿರ್ಣಯವನ್ನು ತೆಗೆದುಕೊಂಡಿದಾರೆಂದು ತಿಳಿಸುವಂತೆ ಮುತ್ತೇನೆ.

ಶ್ರೀ ಪ್ರಸನ್ನಂತರಾಜ್ ವೇಸಾಂಬಿ. –ತಲೆಗೆ ಶಿರಸ್ತ್ರಾಣ ಉಪಯೋಗಿಸಿದರೆ ತಲೆಯ ಕೂದಲು ಉದುರುತ್ತದೆಯಂತೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್.– ನನಗೆ ತಿಳಿದ ಮಟ್ಟಿಗೆ ಸಹಾರ ಮತ್ತು ತಿಳುನಳಿಕೆ ಹೆಚ್ಚಾದಂತೆ ಅವರ ತಲೆ ಬಾಲ್ ಆಗುತ್ತದೆ. ನೂನ್ಯ ಸದಸ್ಯರು ಏನು ಶಿರಸ್ತ್ರಾಣದಿಂದ ತಲೆ ಕೂದಲು ಉದುರುತ್ತದೆಯೆಂದಿದಾರೆ, ಆ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಶಾಂತ್ಪ ಭೀಮಾಶಾ.– ಈ ಶಿರಸ್ತ್ರಾಣವನ್ನು ಉಪಯೋಗ ಮಾಡುವ ಬಗ್ಗೆ ಪೋಲೀಸರ ಕೈಯಲ್ಲಿ ಅಧಿಕಾರ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ಮಾಮನ ಪ್ರಾಕ್ಟೀಸ್ ಮಾಡುವವರಿಗೂ ಕಷ್ಟ ವಾಗಿದೆ.

ಉಪಾಧ್ಯಕ್ಷರು. – ತಾವು ಪ್ರಶ್ನೆಯನ್ನೇ ಕೇಳಲಿಲ್ಲ

ಡಾ|| ಎಚ್. ಎಲ್. ತಿಮ್ಮೇಗೌಡ.– ರಸ್ತೆ ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದೂ ಸಾಯುತ್ತಾರೆ. ಕೈ ಕಾಲಿಗೆ ಪೆಟ್ಟು ಬಿದ್ದವರೂ ಸಾಯುತ್ತಾರೆ. ಬೇರೆ ಕೆಡೆ ಏಟು ಬಿದ್ದವರೂ ಸಾಯುತ್ತಾರೆ. ಇವರೆಲ್ಲಾ ಹೆಲ್ಮೆಟ್ ಧರಿಸಿಲ್ಲದ್ದರಿಂದ ಸತ್ತರು ಎಂದು ಹೇಳುವುದಕ್ಕೆ ಬರುವುದಿಲ್ಲ. ಅಧಿಕಾರಿಗಳು ಕೊಟ್ಟ ಅಂಕಿ ಅಂಶ ತೋರಿಸಿಕೊಂದು ಹೆಲ್ಮೆಟ್ ಧರಿಸಲೇಬೇಕೆಂಬುದು ಸರಿಯಲ್ಲ. ಅಧಿಕಾರಿಗಳು ಅಪಘಾತಗಳ ಫಿಗರ್ಸ್ ಕೊಟ್ಟಿದಾರೆ.

ಉಪಾಧ್ಯಕ್ಷರು. – ತಮ್ಮದು ಸಲಹೆ ಆಯಿತು.

ಒಬ್ಬ ನೂನ್ಯ ಸದಸ್ಯರು.– ಟಿ. ವಿ. ಎಸ್. ಸೋಸೇಡ್‌ನಲ್ಲಿ ಒಬ್ಬ ಹೋದರೆ ಹೆಲ್ಮೆಟ್ ಬೇಕಾಗಿಲ್ಲ ; ಇಬ್ಬರು ಹೋದರೆ ಹೆಲ್ಮೆಟ್ ಹಾಕಬೇಕೆಂದಿದೆ. ಇದರ ಅರ್ಥ ಏನು ಸ್ವಾಮಿ ?

ಶ್ರೀ ಎಂ. ಪಿ. ಪ್ರಕಾಶ್.– ನೂನ್ಯ ಸದಸ್ಯರ ಪ್ರಶ್ನೆ ತರ್ಕಬದ್ಧವಾಗಿದೆ. ಆ ವಾಹನದ ಮೇಲೆ ಇಬ್ಬರು ಕುಳಿತಾಗ ಅದು ಹೋಗುವ ವೇಗ ನುತ್ತು ಸಮತೋಲನವನ್ನು ಅವಲಂಬಿಸಿ ಅಪಘಾತವಾದರೆ ರಕ್ಷಣೆಗೆ ಇರಲಿ ಎಂದು ಹೆಲ್ಮೆಟ್‌ನ್ನು ಕಡ್ಡಾಯಗೊಳಿಸಲಾಗಿದೆ. ಆದರೂ ನೂನ್ಯ ಸದಸ್ಯರು ಈ ಬಗ್ಗೆ ಏನು ಕೇಳಿದ್ದಾರೆ, ಆ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಪ್ರಶ್ನೆ 140 (ತಡೆಹಿಡಿಯಲಾಗಿದೆ).

ಚುಕ್ಕೆ ಪ್ರಶ್ನೆ 141 (14) ಸದಸ್ಯರ ಗೈರುಹಾಜರಿ.

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಹಾಸ್ಟಲುಗಳ ಬಗ್ಗೆ

ನೂನ್ಯ ಸದಸ್ಯರು ಹಾಜರಿರಲಿಲ್ಲ.

141 ಶ್ರೀ ಜಿ. ಭೈರಪ್ಪಾಜಿ (ತುರುವೇ ಕೆರೆ). – ನೂನ್ಯ ಸಮಾಜ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ನೂಲಕ ಪ್ರತಿ ತಾಲ್ಲೂಕಿನಲ್ಲಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ;

ಆ) ಆ ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗೂ ಖರ್ಚು ಮಾಡುತ್ತಿರುವ ಹಣವೆಷ್ಟು ? ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಈ ಬಾಬಿಗಾಗಿ ಖರ್ಚಾಗುತ್ತಿರುವ ಹಣವೆಷ್ಟು ?

ಇ) ಆ ವಿದ್ಯಾರ್ಥಿ ನಿಲಯಗಳಲ್ಲಿ ಹಣ ದುರುಪಯೋಗದ ಅಪಾದನೆಗಳೇನಾದರೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಈ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿರುತ್ತದೆಯೆ ?

ಶ್ರೀಮತಿ ಚಂದ್ರ ಪ್ರಭಾ ಅರಸ್ (ಸಮಾಜ ಕಲ್ಯಾಣ, ರೇಷ್ಮೆ ಇಲಾಖೆ ಮಂತ್ರಿಗಳು).—

ಅ) 793 ವಿದ್ಯಾರ್ಥಿ ನಿಲಯಗಳ ಸಂಖ್ಯೆ ತೋರಿಸುವ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) (1) ಸರ್ಕಾರಿ ನೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ 75 ರೂ. ನಂತೆ ವರ್ಷದಲ್ಲಿ 10 ತಿಂಗಳಿಗೆ ಊಟದ ವೆಚ್ಚ ಕ್ಕಾಗಿ ಕೊಡಲಾಗುತ್ತದೆ. ಇದಲ್ಲದೆ ಉಡುಪು, ಪಥ್ಯ, ಪುಸ್ತಕ ಲೇಖನ ಸಾಮಗ್ರಿ, ಔಷಧಿ ಸಾಲಭ್ಯ ಹಾಸಿಗೆ, ಸೋವು ಮುಂತಾದವುಗಳನ್ನು ಸರ್ಕಾರದ ಖರ್ಚಿನಲ್ಲಿ ಕೊಡ ಲಾಗುತ್ತದೆ.

(2) ಅನುದಾನ ಪಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ ಊಟದ ವೆಚ್ಚಕ್ಕಾಗಿ ತಿಂಗಳಿಗೆ 75 ರೂ. ನಂತೆ ವರ್ಷದಲ್ಲಿ 10 ತಿಂಗಳಿಗೆ ಸಹಾಯ ಧನವನ್ನು ಮುಂಜೂರು ಮಾಡಲಾಗುತ್ತದೆ.

(3) ಪೂರ್ಣತೆ ಪಡೆದ ಕಾಲೇಜು ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ 15 ರೂ ಗಳನ್ನು ಹೆಚ್ಚುವರಿ ಊಟದ ಮತ್ತು ವೆಚ್ಚಕ್ಕಾಗಿ ಮುಂಜೂರು ಮಾಡಲಾಗುತ್ತದೆ.

1982-83ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಮೂಲಗಳಿಂದ ವಿದ್ಯಾರ್ಥಿ ನಿಲಯಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಗೆ 5,49,72,000 ರೂ. ಗಳನ್ನು ಒದಗಿಸಲಾಗಿದೆ.

ಇ) ದೂರು ಬಂದಿಲ್ಲ,

ಈ) ಉದ್ಭವಿಸುವುದಿಲ್ಲ.